ಶ್ರೀ ಜಿ. ಎಸ್. ದೊಡ್ಡಮೇಟಿ.—ಈ 37 ತಾಲ್ಲೂಕುಗಳಲ್ಲಿ ಏನಿವೆ. ಅವುಗಳಲ್ಲಿ ಯಾವ ತರಹ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೀರಿ. ಇದಕ್ಕಾಗಿ ಕೇಂದ್ರ ಸರ್ಕಾರದಿಂದು ಎಷ್ಟು ಸಹಾಯವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಧ್ಯಕ್ಕೆ ಆ ವಿಚಾರ ನನ್ನಲ್ಲಿ ಈಗ ಇಲ್ಲ. ಕೇಂದ್ರ ಸರ್ಕಾರದ ಸಹಾಯವನ್ನೂ ತೆಗೆದುಕೊಂಡು ಅನೇಕ ಕಡೆ ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳು ಬಂದಿವೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಮಾನ್ಯ ಸಚಿವರು ಹೇಳಿದಂತಹ 37 ಹಿಂದುಳಿದ ತಾಲ್ಲೂಕುಗಳಲ್ಲಿ ಅಲ್ಲಿ ಎಲ್ಲಾ ಕಡೆ ಕೈಗಾರಿಕಾ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆಯೋ ಅಥವಾ ಇಲ್ಲವೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ಕಡೆ ಇದ್ದಾರೆ. ಕೆಲವು ಕಡೆ ಇಲ್ಲ.

ಶ್ರೀ ಎಂ. ಎಂ. ನದಾಫ್.—ಧಾರವಾಡ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳು ಔದ್ಯಮಿಕ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದ್ದೀರಿ ? ಅಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪಟ್ಟಿಯಲ್ಲಿ ಎಲ್ಲ ವಿವರಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ನೋಡಿ ತಿಳಿದುಕೊಳ್ಳಬಹುದು. ನಾನು ಓದಿಬಿಡುತ್ತೇನೆ :—ಹುಬ್ಬಳ್ಳಿ, ಧಾರವಾಡ, ಹಾವೇರಿ, ಬ್ಯಾಡಗಿ, ಹಾನಗಲ್, ಹಿರೇಕೆರೂರು, ಕಲ್‌ಗಟ್ಗಿ, ಕುಂದಗೋಳ್, ಮುಂಡರ್ಗಿ, ನರಗುಂದ, ನವಲ್‌ಗುಂದ, ರೋಣ್, ಸವಣೂರು, ಶಿಗ್ಗಾಂ, ಶಿರಹಟ್ಟಿ, ರಾಣೆಬೆನ್ನೂರು ಹಾಗೂ ಗದಗ್–ಬೆಟಗೇರಿ ಇವೆಲ್ಲಾ ತಾಲ್ಲೂಕುಗಳು ಸೇರಿವೆ.

ಶ್ರೀ ಎಂ. ಮಹದೇವ್.—ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕಾಗಿ ಹಿಂದುಳಿದ ತಾಲ್ಲೂಕುಗಳಿಂದ ಅರ್ಜಿ ಬಂದರೆ ಸರ್ಕಾರ ಸ್ವೀಕರಿಸುತ್ತದೆಯೇ ಅಥವಾ ಪಟ್ಟಣ ಪ್ರದೇಶಗಳಿಗೆ ಪರವಾನಗಿಯನ್ನು ಕೊಡುತ್ತೀರೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಿನ ಸರ್ಕಾರ ತನ್ನ ಹೊಸ ಕೈಗಾರಿಕಾ ನೀತಿಯನ್ನು ಈಗಾಗಲೇ ಜಾಹಿರಾತುಪಡಿಸಿದೆ. ಹೊಸ ಕೈಗಾರಿಕಾ ನೀತಿಯ ಪ್ರಕಾರ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳ ಕಡೆ ಅಂದರೆ ಗುಡಿ ಕೈಗಾರಿಕಾ, ಗೃಹಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂಬ ಆಧಾರದ ಮೇಲೆ ಆ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡಿವೆ.

ಶ್ರೀ ವಿ. ಎಸ್. ಕೌಜಲಗಿ.—ಹಿಂದುಳಿದ ತಾಲ್ಲೂಕುಗಳಲ್ಲಿ ಔದ್ಯಮಿಕ ಅಭಿವೃದ್ಧಿಯ ಸಲುವಾಗಿ ಕೈಗಾರಿಕೆಗಳನ್ನು ಮಾಡಬೇಕೆಂಬ ಉದ್ದೇಶವನ್ನು ತಾವು ಇಟ್ಟುಕೊಂಡಿದ್ದೀರಿ. ಆದರೆ ನಿಮ್ಮ ಇಲಾಖೆ ಕೊಟ್ಟಂತಹ ಸೌಲಭ್ಯ ಸಕಾಲಕ್ಕೆ ಸಣ್ಣ ಉದ್ದಿಮೆದಾರರಿಗೆ ಸರಿಯಾದ ಸಮಯಕ್ಕೆ ಮುಟ್ಟುತ್ತಿಲ್ಲ; ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ಕ್ರಮವನ್ನು ಇದುವರೆವಿಗೂ ಸರ್ಕಾರ ಕೈಗೊಂಡಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕಾಗಿ 15–7–83 ರಂದು ಹೊಸ ಕೈಗಾರಿಕಾ ನೀತಿಯನ್ನು ಪ್ರಕಟ ಮೊಡಿದ್ದೇವೆ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ವಿದ್ಯುಚ್ಛಕ್ತಿ, ಭೂಮಿ, ಹಾಗೂ ಹಣಕಾಸು, ತಾಂತ್ರಿಕ ಸಹಾಯ ಈ ಎಲ್ಲ ಉಲ್ಲೇಖವನ್ನು ಒಂದೇ ಕಾಗದದಲ್ಲಿ ಕೊಡಬೇಕೆಂದು ನಿಯಮಾವಳಿಗಳನ್ನು ಅಳವಡಿಸಲಾಗಿದೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ಯಾರಾದರೂ ಮುಂದೆ ಬರುತ್ತಿದ್ದಾರೆಯೇ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂದು ಬರಬೇಕೆಂದು ಸರ್ಕಾರದ ಅಭಿಲಾಶೆಯಾಗಿದೆ. ಇನ್ನೂ ಹೆಚ್ಚಾಗಿ ಬರುತ್ತಿಲ್ಲ. ಬರತಕ್ಕಂತಹ ವಾತಾವರಣವನ್ನು ನಾವು ನಿರ್ಮಾಣ ಮಾಡಬೇಕಾಗಿದೆ.

ವಿಷಯ :— ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ ನಿಡುವುದು.

ಪ್ರಶ್ನೆ. 122(33) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸುವ ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿರುವ ಸಹಾಯ ಧನವೆಷ್ಟು ;

ಆ. ಈ ಸಹಾಯಧನದ ಪ್ರಮಾಣದಲ್ಲಿ ತಾಲೂಕಿನಿಂದ ತಾಲ್ಲೂಕಿಗೆ ವ್ಯತ್ಯಾಸವಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿರುವುದೆ;

ಇ. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ;

ಈ. ಪ್ರತಿಯೊಂದು ತಾಲ್ಲೂಕುಗಳಿಗೂ ಏಕರೀತಿಯಲ್ಲಿ ಸಹಾಯಧನವನ್ನು ಕೊಡಲು ಸರ್ಕಾರದವರು ಏರ್ಪಾಡು ಮಾಡುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—

ಅ. ವಲಯ 2ರಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ರೂ. 5 ಲಕ್ಷ ಗರಿಷ್ಟಮಿತಿ ಇರುವಂತೆ ಕೈಗಾರಿಕೆ

ಘಟಕದ ಸ್ಥಿರಾಸ್ತಿ ಬೆಲೆಯ ಬಂಡವಾಳ ಹೂಡಿಕೆ ಶೇಕಡಾ 10ರಷ್ಟು ರಾಜ್ಯ ಸರ್ಕಾರದ ಸಹಾಯಧನ ನೀಡುವುದು.

ವಲಯ 3 ಏಳೂವರೆ ಲಕ್ಷ ರೂಪಾಯಿ ಗರಿಷ್ಟಮಿತಿ ಇರುವಂತೆ ಕೈಗಾರಿಕಾ ಘಟಕದ ಸ್ಥಿರಾಸ್ತಿ ಬಂಡವಾಳ ಹೂಡಿಕೆ ಬೆಲೆಯ ಶೇಕಡಾ 15ರಷ್ಟು ರಾಜ್ಯ ಸರ್ಕಾರದ ಸಹಾಯಧನ ನೀಡುವುದು.

ಆ. ಗೊತ್ತಿದೆ.

ಇ. ರಾಜ್ಯವನ್ನು ಕೈಗಾರಿಕಾ ಅಭಿವೃದ್ಧಿಗೋಸ್ಕರವಾಗಿ 4 ವಲಯಗಳಾಗಿ ವಿಭಾಗಿಸಲಾಗಿದೆ.

ಈ. ಇಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿ ಒಟ್ಟು 10 ತಾಲ್ಲೂಕುಗಳ ಏನು ಕೈಗಾರಿಕೆಗಳು ಇವೆ ಅವುಗಳಿಗೆ ಸಹಾಯಧನ ಕೊಡುವಂಥಾ ವ್ಯವಸ್ಥೆ ಏಕರೀತಿಯಲ್ಲಿ ಇಲ್ಲ. ತಮ್ಮ ಉತ್ತರದಲ್ಲಿ ಶೇಕಡಾ 10ರಷ್ಟು ರಾಜ್ಯ ಸರ್ಕಾರದ ಸಹಾಯಧನ ನೀಡುವುದು ಎಂದು ಹೇಳಿದ್ದೀರಿ. ಕೆಲವು ತಾಲ್ಲೂಕುಗಳಿಗೆ ಶೇಕಡಾ 10ರಷ್ಟು ಕೊಟ್ಟಿದ್ದೀರಿ. ಇನ್ನು ಕೆಲವು ತಾಲ್ಲೂಕುಗಳಿಗೆ ಶೇಕಡಾ 15 ರಷ್ಟು ಕೊಟ್ಟಿದ್ದೀರಿ. ಈ ತಾರತಮ್ಯಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯಸರ್ಕಾರದ ಸಹಾಯಧನ ಆಯಾಯ ತಾಲ್ಲೂಕಿನ ಹಿಂದುಳಿದ ಪ್ರದೇಶಗಳನ್ನು ಅವಲಂಬಿಸಿರುತ್ತದೆ. ಈ ಬಗ್ಗೆ 1982 ರಲ್ಲಿ ಸರ್ಕಾರ ಒಂದು ನೀತಿಯನ್ನು ರೂಪಿಸಿದೆ. ಆ ನೀತಿಮೇಲೆ ಕೊಡುತ್ತಾ ಇದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕು ಹಿಂದುಳಿದಿದೆ ಮತ್ತು ಅವಕ್ಕೆ ಎಷ್ಟೆಷ್ಟು ಸಬ್ಸಿಡಿ ಕೊಟ್ಟಿದ್ದೀರಿ ? ಮತ್ತು ಯಾವ್ಯಾವ ತಾಲ್ಲೂಕು ಮುಂದುವರೆದ ಪ್ರದೇಶವಾಗಿದೆ ಅದಕ್ಕೆ ಎಷ್ಟೆಷ್ಟು ಸಬ್ಸಿಡಿ ಕೊಟ್ಟಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿವರ ಈಗ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ಈ ಸಬ್ಸಿಡಿ ಕೊಡುವುದು ತಾಲ್ಲೂಕುಗಳ ಮೇಲೆ ಅವಲಂಬಿಸುವುದಿಲ್ಲ. ಕೈಗಾರಿಕೆಯನ್ನು ಅವಲಂಬಿಸಿರುತ್ತ. ಮತ್ತು ಸಹಾಯಧನ, ಅದರ ಅರ್ಹತೆಗನುಗುಣವಾಗಿ ಕೊಡಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಒಂದು ತಾಲ್ಲೂಕಿಗೂ ಇನ್ನೊಂದು ತಾಲ್ಲೂಕಿಗೂ ಕೊಟ್ಟಿರುವ ಸಹಾಯ ಧನದಲ್ಲಿ ವ್ಯತ್ಯಾಸ ಇದೆ ಅನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ನಿಮ್ಮ ಪ್ರಶ್ನೆಗೆ ಮೊದಲೇ ಉತ್ತರ ಹೇಳಿದ್ದಾರಲ್ಲಾ. ಅದು ತಾಲ್ಲೂಕಿನ ಮೇಲೆ ಅವಲಂಬಿಸುವುದಿಲ್ಲ. ಕೈಗಾರಿಕೆಗಳ ಮೇಲೆ ಅವಲಂಬನೆಯಾಗಿರುತ್ತದೆಂದು ಹೇಳಿದರಲ್ಲಾ.

ಶ್ರೀ ವೈ. ಕೆ. ರಾಮಯ್ಯ.—ಸ್ವಾಮಿ, ಒಂದು ತಾಲ್ಲೂಕಿಗೂ, ಮತ್ತೊಂದು ತಾಲ್ಲೂಕಿಗೂ ಈ ಸಹಾಯಧನ ಕೊಡುವುದರಲ್ಲಿ ಏನು ವ್ಯತ್ಯಾಸ ಇದೆ ಅದನ್ನು ಇನ್ನು ಮುಂದಾದರೂ ಕೂಡ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಅದು ತಾಲ್ಲೂಕುಗಳನ್ನು ಅವಲಂಬಿಸಿರುವುದಿಲ್ಲ. ಅಲ್ಲಿರುವ ಕೈಗಾರಿಕೆಗಳ ಮೇಲೆ ಅವಲಂಬಿಸಿರುತ್ತದೆ ಎಂದು ಉತ್ತರ ಹೇಳಿದರಲ್ಲಾ.

ಶ್ರೀ ವೈ. ಕೆ. ರಾಮಯ್ಯ.—ಸ್ವಾಮಿ, ತುಮಕೂರು. ಕುಣಿಗಲ್, ತಿಪಟೂರು, ಗುಬ್ಬಿ, ಸಿರಾ ಈ ತಾಲ್ಲೂಕುಗಳಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಸಬ್ಸಿಡಿಯನ್ನ ಕೊಟ್ಟಿದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿವರ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ತಾಲ್ಲೂಕಿನಲ್ಲಿ ಕೈಗಾರಿಕೆಗಳಲ್ಲಿ ಮುಂದುವರೆದ ಪ್ರದೇಶಗಳಾವುವು, ಮುಂದುವರೆಯದೆ ಇರತಕ್ಕಂಥಾ ಪ್ರದೇಶಗಳಾವುವು, ಮತ್ತು ಅವರಿಗೆ ಎಷ್ಟೆಷ್ಟು ಸಬ್ಸಿಡಿ ಕೊಟ್ಟಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿವರ ಈಗ ನನ್ನ ಹತ್ತಿರ ಇಲ್ಲ.

ವಿಷಯ :— ಧಾರವಾಡ ಜಿಲ್ಲೆಯ ಕೆಲವು ಕಡೆ ಕುಡಿಯುವ ನೀರಿನ ಯೋಜನೆಯ ಮಂಜೂರಾತಿ.

ಪ್ರಶ್ನೆ. 123(48) ಶ್ರೀ ಎ. ಎಂ. ನಡಾಫ್ (ಶಿಗ್ಗಾಂ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಧಾರವಾಡ ಜಿಲ್ಲೆ ಸವಣೂರು ತಾಲ್ಲೂಕು, ಹಿರೇಮರಹಳ್ಳಿ ಬಳಿ ವರದಾ ನದಿಗೆ ಅಡ್ಡಲಾಗಿ ಒಂದು ಬ್ಯಾರೇಜನ್ನು ಕಟ್ಟಲಾಗಿದೆ, ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಸ್ಥಳೀಯ ಶಾಸಕರೂ, ಹಿರೇಮರಹಳ್ಳಿ ಮತ್ತು ಚಿಕ್ಕಮರಳಿಹಳ್ಳಿಯ ಜನಗಳು ಬ್ಯಾರೇಜಿಗೆ ನೀರಿನ ಪೂರ್ಣ ಉಪಯೋಗವನ್ನು ನೀರಾವರಿಗೆ ಪಡೆಯಲು ಏತ ನೀರಾವರಿ ಮಂಜೂರಾತಿಗಾಗಿ ಒತ್ತಾಯಿಸಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ. ಏತ ನೀರಾವರಿಯ ಮಂಜೂರಾತಿಗಾಗಿ ನಕ್ಷೆಗಳು ಮತ್ತು ಅಂದಾಜುಗಳು ಸರ್ಕಾರಕ್ಕೆ ಬಂದಿದೆ ಎಂಬುದು ನಿಜವೇ ;